ತಾಲ್ಲೂಕಂವಾರು ವಿವರಗಳು ಈ ಕೆಳಗಿನಂತಿವೆ.

ಮಂಡ್ಯ ಜಿಲ್ಲೆ	
ಶ್ರೀ ರಂಗಪಟ್ಟಣ ತಾಲ್ಲೂಕು	೩೦೫೬ ಹೆಕ್ಟೇರು
ಮೈಸೂರು ಜಿಲ್ಲೆ	
ಮೈಸೂರು ತಾಲ್ಲೂಕು	೧೮,೨೩೫ ಹೆಕ್ಟೇರು
ಹೆಚ್. ಡಿ. ಕೋಟೆ ತಾಲ್ಲೂಕು	೧,೮೮೮ ಹೆಕ್ಟೇರು
ನಂಜನಗೂಡು ತಾಲ್ಲೂಕು	೬,೧೯೧ ಹೆಕ್ಟೇರು
ಟಿ. ನರಸೀಪುರ ತಾಲ್ಲೂಕು	೩,೦೮೫ ಹೆಕ್ಟೇರು

ಇ) ಕಾಲುವೆಯ ೫೦ ಕಿ ಮೀಗಳವರೆಗಿನ ಕೆಲಸಗಳು ಪ್ರಗತಿಯ ವಿವಿಧ ಹಂತಗಳಲ್ಲಿವೆ.

ಈ) ಸಂಪನ್ಮೂಲಗಳ ಇತಿಮಿತಿಯೇ ಮುಖ್ಯ ಕಾರಣ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ, ಇದು ಶಂಕುಸ್ಥಾಪನೆಯಾಗಿ ಹತ್ತು ವರ್ಷ ಆಯಿತು. ಆದರೆ ನಾಲಾ ಕೆಲಸ ಯಾವಾಗ ಪ್ರಾರಂಭವಾಯಿತು ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು. ಆದರ ಜೊತೆಗೆ ನಾಲಾ ಕೆಲಸ ಎಂದು ನಿಂತಿತು ? ಕೆಲಸ ನಿಲ್ಲುವುದಕ್ಕೆ ಕಾರಣ ಹೆಣಕಾಸಿನದು ಎಂದು ಹೇಳುತಾ ರೆ. ಈಗ ಆಲ್ಲಿರತಕ್ಕ ಸಬ್-ಡಿವಿಷನ್ ಏನಾದರೂ ಕೆಲಸ ಮಾಡುತ್ತಿದೆಯೇ ? ಅಥವಾ ಬರೀ ರಿಜಿಸ್ಟರ್‌ನಲ್ಲಿ ಸೈನ್ ಹಾಕಿ ದುಡ್ಡು ತೆಗದು ಕೊಳ್ಳುತ್ತಿದಾ ರೆಯೆ ? ಅವರಿಗೆ ಎಷ್ಟು ಮಾತ್ರ ಕೆಲಸ ವಹಿಸಿದ್ದಾರೆ ? ಮೂರನೆಯದು, ಇಲ್ಲಿಯವರೆಗೆ ಆ ನಾಲೆಯಿಂದ ಏನಾದರೂ ನೀರು ಸರಬರಾಜು ಆಗಿದೆಯೇ ? ಆಗಿದ್ದರೆ ಎಷ್ಟು ಎಕರೆಗೆ ಅಥವಾ ಹೆಕ್ಟೇರ್‌ಗೆ ನೀರು ಕೊಟ್ಟಿದ್ದಾರೆ ದಯವಿಟ್ಟು ತಿಳಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೆ, ನೀರನ್ನು ಹೆಚ್ಚು ಕೊಟ್ಟಿಲ್ಲ. ಸುಮಾರು ಒಂದು ಸಾವಿರ, ಎರಡು ಸಾವಿರ ಎಕರೆಗೆ ಮಾತ್ರ ಕೊಟ್ಟಿದೆ. ಕೆಲಸ ಪ್ರಾರಂಭವಾಗಿ ಬೇರೆ ಬೇರೆ ಹಂತದಲ್ಲಿದೆ. ಈಗಾಗಲೇ ಕಾಲುವೆಗಳ ಕೆಲಸ ಪ್ರಾರಂಭ ಆಗಿದೆ. ಆಣೆಕಟ್ಟಿನ ಕೆಲಸವನ್ನು ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿತ್ತು. ಅವನು ಸರಿಯಾಗಿ ಕೆಲಸ ಮಾಡದಿದ್ದುದರಿಂದ ಅವನ ಕಂಟ್ರಾಕ್ಟನ್ನು ರದ್ದು ಮಾಡಿದ್ದೇವೆ. ಪುನಃ ಟೆಂಡರ್ ಕರೆದಿದ್ದಾರೆ. ಈ ಕೆಲಸ ಬೇಗ ಪ್ರಾರಂಭ ಮಾಡುತ್ತೇವೆ. ಈ ಕೆಲಸವನ್ನು ಕಳೆದ ಎರಡು ಮೂರು ವರ್ಷಗಳಲ್ಲಿ ಕೈಗೆತ್ತಿಕೊಂಡಿದೆ. ಹೋದ ವರ್ಷ ೩೫೫ ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿದ್ದೆವು. ಆದರಲ್ಲಿ ೧೯೪ ಲಕ್ಷ ರೂಪಾಯಿಗಳು ಖರ್ಚಾಗಿದೆ. ಈ ವರ್ಷ ೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇದನ್ನೆಲ್ಲಾ ಖರ್ಚು ಮಾಡಿ ಕಾಲುವೆ ಕೆಲಸವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ನನಗೆ ತಿಳಿದಮಟ್ಟಿಗೆ ಕಂಟ್ರಾಕ್ಟರಿಗೆ ಬಿಲ್ ಪಾವತಿ ಆಗಿಲ್ಲ, ಅದಕ್ಕಾಗಿ ಕೆಲಸ ನಿಂತಿದೆ. ಅದು ನಿಜವೇ ದಯವಿಟ್ಟು ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಂಟ್ರಾಕ್ಟರ್ ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಕಾಂಟ್ರಾಕ್ಟ್ ಕಾನ್ಸಲ್ ಮಾಡಿದ್ದೇವೆ. ನೋಟೀಸ್ ಕೊಟ್ಟು ರದ್ದುಮಾಡಿ ಪುನಃ ಟೆಂಡರ್ ಕರೆದಿದ್ದೇವೆ. ಕೆಲಸ ಪ್ರಾರಂಭ ಮಾಡುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನೀರಾವರಿ ಆಣೆಕಟ್ಟುಗಳ ಸಂಖ್ಯೆ.

೪೭೨. ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನೀರಾವರಿ ಆಣೆಕಟ್ಟುಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ನಾದುರಸ್ತಿಯಲ್ಲಿರುವ ಆಣೆಕಟ್ಟುಗಳೆಷ್ಟು ?

ಇ) ಸಣ್ಣ ನೀರಾವರಿ ಇಲಾಖೆಯಲ್ಲಿರುವ ಆಣೆಕಟ್ಟುಗಳ ಸಂಖ್ಯೆ ಎಷ್ಟು ?

ಈ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್‌ಗೆ ಸೇರಿರುವ ಅಣೆಕಟ್ಟುಗಳ ಸಂಖ್ಯೆ ಎಷ್ಟು ?

ಉ) ನಾದುರಸ್ತಿಯಾದ ಅಣೆಕಟ್ಟುಗಳಿಗೆ ರಿಪೇರಿ ಮಾಡಲು ೧೯೮೬ ರಿಂದ ೧೯೮೯ರ ತನಕ ಬಿಡುಗಡೆ ಮಾಡಲಾದ ಹಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೩೮೬.

ಆ) ೧೯೦.

ಇ) ೮.

ಈ) ೩೭೮.

ಉ) ೧೯೮೬–೮೭ ೧೧.೮೮ ಲಕ್ಷ ರೂ.ಗಳು.
೧೯೮೭–೮೮ ೧೪.೦೨ ಲಕ್ಷ ರೂ ಗಳು.
೧೯೮೮–೮೯ ೧೫.೦೩ ಲಕ್ಷ ರೂ.ಗಳು.

ಶ್ರೀ ಜಿ. ಎಸ್. ಆಚಾರ್ (ಶ್ರೀ ವಸಂತ ಸಾಲಿಯಾನ ಅವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಉತ್ತರದಲ್ಲಿ ೩೮೬ ಅಣ್ಣೆಕಟ್ಟುಗಳಲ್ಲಿ ೧೯೦ಅಣೆಕಟ್ಟುಗಳು ನಾದುರಸ್ತಿಯಲ್ಲಿವೆ ಅಂದರೆ ಶೇಕಡ ೫೦ರಷ್ಟು ನಾದರಸ್ತಿಯಲ್ಲಿವೆ ಎಂದೆ ಹಾಗಾಯಿತು. ಅದೇ ರೀತಿ ನೀರಾವರಿ ಇಲಾಖೆಯಲ್ಲಿ ಪೂರ್ತಿ ನಾದರಸ್ತಿಯಲ್ಲಿದೆ. ಈ ಅಣೆಕಟ್ಟುಗಳಿಗೆ ಮೂರು ವರ್ಷದಿಂದ ಬಿಡುಗಡೆ ಮಾಡಿರುವ ಹಣ ೪೦.೫೩ ಲಕ್ಷ ರೂಪಾಯಿಗಳು. ಇಷ್ಟು ಹಣ ಬಿಡುಗಡೆಯಾಗಿದ್ದರೂ ಆ ಹಣವನ್ನು ಪೂರ್ತಿ ಖರ್ಚು ಮಾಡಲಾಗಿದೆಯೆ ? ನಮಗೆ ತಿಳಿದಹಾಗೆ ಖರ್ಚಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಗಾಲ ಬರುವುದರಿಂದ ಫೆಬ್ರವರಿ ಮಾರ್ಚಿಯಲ್ಲಿ ಹಣ ಬಿಡುಗಡೆಯಾದರೆ ಹಣ ಖರ್ಚಾಗುವುದಿಲ್ಲ ಉಡುಪಿಯಲ್ಲಿ ೬೧ ಅಣೆಕಟ್ಟಿಗೆ ೬೧ ಸಾವಿರ ರೂಪಾಯಿ ಮಾತ್ರ ಬಿಡುಗಡೆಯಾಗಿದೆ. ಕುಂದಾಪುರದಲ್ಲಿ ೭೦ ಅಣೆಕಟ್ಟಿಗೆ ೫೧ ಸಾವಿರ ರೂಪಾಯಿ ಬಿಡುಗಡೆಯಾಗಿದೆ ಎಂದು ಅಲ್ಲಿನ ಶಾಸಕರು ಹೇಳಿದ್ದಾರೆ. ಕೆಲವೇ ವರ್ಷಗಳ ಹಿಂದೆ ರಚಿತವಾದ ನೀರಾವರಿ ಕಾಮಗಾರಿಗಳು ಇಷ್ಟು ಬೇಗ ಹಾಳಾಗುವುದಕ್ಕೆ ಕಾರಣ ಏನು ? ಉದಾಹರಣೆಗೆ ಕೊಕ್ಕಾಡಿ ಅಣೆಕಟ್ಟು, ಕುಂದಾಪುರ ತಾಲ್ಲೂಕಿನ ಸೌಕೂರು ಅಣೆಕಟ್ಟು ಇವುಗಳನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಟ್ಟಿದ್ದರೂ ಪೂರ್ತಿಯಾಗಿ ಹಾಳಾಗಿವೆ. ಸರ್ಕಾರದ ಆಸ್ತಿ ಇದು. ಆದ್ದರಿಂದ ಈ ನೀರಾವರಿ ಯೋಜನೆಗಳನ್ನು ಉಳಿಸಿಕೊಳ್ಳುವುದಕ್ಕೆ ಸರ್ವೇ ಮಾಡುತ್ತಿದ್ದಾರೆಯೆ ? ಪೂರ್ತಿ ಹಣವನ್ನು ಸರ್ಕಾರ ಒದಗಿಸುತ್ತದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾದುರಸ್ತಿಯಾದ ಅಣೆಕಟ್ಟುಗಳ ರಿಪೇರಿಗೆ ೧೯೮೬–೮೭ರಲ್ಲಿ ೧೧,೮೮ ೦೭೦ ರೂಪಾಯಿ ಕೊಟ್ಟಿದ್ದು ೧೮, ೩೯,೦೦೦ ರೂಪಾಯಿ ವೆಚ್ಚವಾಗಿದೆ. ೧೯೮೭–೮೮ರಲ್ಲಿ ೧೧ ಲಕ್ಷ ಕೊಟ್ಟಿದ್ದರೆ ೧೧ ಲಕ್ಷ ೪೦ ಸಾವಿರ ರೂಪಾಯಿ ಖರ್ಚಾಗಿದೆ. ೧೯೮೮ರಲ್ಲಿ ೧೪ ಲಕ್ಷ ರೂಪಾಯಿ ಖರ್ಚಾಗಿದೆ. ಒದಗಿಸಿದ ಹಣ ಖರ್ಚಾಗುತ್ತಿದೆ. ಹೆಚ್ಚು ಹಣ ಒದಗಿಸಬೇಕೆಂದು ಸದಸ್ಯರು ಹೇಳಿದ್ದಾರೆ. ಅದಕ್ಕೆ ಪ್ರಯತ್ನ ಮಾಡುತ್ತೇನೆ.

ತುಂಗಾ ಮೇಲ್ದಂಡೆ ಯೋಜನೆ.

೫೬೬. ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರದ ಅನುಮೋದನೆ ಪಡೆಯುವಲ್ಲಿ ವಿನಾ ಕಾರಣ ವಿಳಂಬವಾಗುತ್ತಿರಲು ಕಾರಣವೇನು ?

ಆ) ೧೯೮೯–೯೦ನೇ ವರ್ಷದಿಂದಲಾದರೂ ಈ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ ?

ಇ) ಇದುವರೆವಿಗೂ ಈ ಯೋಜನೆಗೆ ಸರ್ಕಾರವು ಖರ್ಚು ಮಾಡಿರುವ ಮೊಬಲಗೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ತುಂಗಾ ಮೇಲ್ದಂಡೆ ಯೋಜನೆಯ ಪರ್ಯಾಯ ಪ್ರಸ್ತಾವಗಳು ಅನ್ವೇಷಣೆಯಲ್ಲಿರುವುದರಿಂದ, ಯೋಜನೆಯ ವರದಿಯನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿಲ್ಲ.